ದಿನಾಂಕಃ 18-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ.ಎಸ್.ಎನ್.ಕೆ ವಕೀಲರಿಂದ ಃ**

1. ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ನೀಡಿದ್ದೇನೆ. ನಾನು ದಸ್ತಾವೇಜು ಬರಹಗಾರ ನೋಂದಣಿ ಮಾಡಿಸಿದ್ದೇನೆ. ನಾನು 15 ವರ್ಷಗಳಿಂದ ದಸ್ತು ಬರಹಗಾರನೆಂದು ಕೆಲಸ ಮಾಡುತ್ತೇನೆ. ಪ್ರಾಮಿಸರಿ ನೋಟ ಒಂದೇ ನಮೂನೆ ಇರುತ್ತದೆ. ಪ್ರಾಮಿಸರಿ ನೋಟನಲ್ಲಿ 13 ನಮೂನೆ ಇದೆ ಎಂದರೆ ಗೊತ್ತಿಲ್ಲ. ಪ್ರಾಮಿಸರಿ ನೋಟಗೆ ನೋಂದಣಿ ಶುಲ್ಕ ಇರುವುದಿಲ್ಲ. ಈ ಪ್ರಾಮಿಸರಿ ನೋಟ ಬರೆದಾಗ ನಾನು ರಜಿಸ್ಟರ ಇಟ್ಟಿರಲಿಲ್ಲ. ಪ್ರತಿವಾದಿ ದಶರಥ ಮಾದರರವರ ಸದರಿಯವರು ಮೃತಪಟ್ಟಿದ್ದು ಈಗ ಅವರ ಹೆಂಡತಿ ದಾವೆಯಲ್ಲಿ ಇದ್ದಾರೆ. ಸದರಿ ದಶರಥರವರ ವಿರುದ್ದ ದಾವೆ ದಾಖಲಾಗಿಲ್ಲ ಎಂದರೆ ಸರಿಯಲ್ಲ. ದಶರಥರವರು ಮೃತ ಪಟ್ಟ ಬಗ್ಗೆ ವಾದಿ ತಿಳಿಸಿದ್ದರು.

2. ವಾದಿಗೆ ಹಣ ಕೊಡುವಂತೆ ನಾನು ಕೇಳಿಕೊಂಡೆನು ಎಂದರೆ ಸರಿಯಲ್ಲ. ನಾನು ಹೇಳಿದ ಮೇಲೆ ವಾದಿ ಹಣ ಕೊಡಲು ಒಪ್ಪಿ ಪ್ರತಿವಾದಿಗೆ ಹಣ ನೀಡಿದರು ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗೆ ಹಣ ಕೊಡಲು ಒಪ್ಪಿಕೊಂಡಿದ್ದರು ಆದರೆ ಹಣ ನೀಡಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ಮಧ್ಯೆ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ವಾದಿ 100, 500 ನೋಟುಗಳನ್ನು ಪ್ರತಿವಾದಿಗೆ ನನ್ನ ಕಚೇರಿಯಲ್ಲಿ ಕೊಟ್ಟಿದ್ದರು. ಯಾವ ಮುಖಬೆಲೆಯ ಎಷ್ಟು ಹಣ ಇತ್ತು ಗೊತ್ತಿಲ್ಲ. ನಾನು ವಾದಿ ಮತ್ತು ಪ್ರತಿವಾದಿ ಮಧ್ಯೆ ಒಟ್ಟು 4 ಪ್ರಾಮಿಸರಿ ನೋಟ ಬರೆದುಕೊಟ್ಟಿರುತ್ತೇನೆ ಅವುಗಳನ್ನು ಹೊರತುಪಡಿಸಿ ಬೇರೆ ಯಾವ ದಾಖಲೆಗಳನ್ನು ಬರೆದಿಲ್ಲ. 15-07-2016, 16-07-2016, 18-07-2016, 18-07-2016 ರಂದು ಸದರಿ ಪ್ರಾಮಿಸರಿ ನೋಟಗಳನ್ನು ಬರೆದಿದ್ದೇನೆ. ಪ್ರತಿವಾದಿ ನನ್ನ ಕಚೇರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿ ಬರವಣಿಗೆ ರೂಪ ಸಹಿ ಮಾಡುತ್ತಿದ್ದರು. ಸದರಿ 4 ಪ್ರಾಮಿಸರಿ ನೋಟ 65,000/- ರೂಗಳಿಗೆ ಸಂಬಂಧ ಪಟ್ಟಿದ್ದು ಇರುತ್ತವೆ. ಸದರಿ ಹಣದ ವ್ಯವಹಾರದ ಕಾರಣ ನಾನು ಕೇಳಿಲ್ಲ ಎಂದರೆ

ಸರಿ. ಪ್ರಾಮಿಸರಿ ನೋಟಗಳನ್ನು ಬರೆದಾಗ ಪ್ರತಿವಾದಿ ಅವನ ಹೆಂಡತಿ ಊರಿನಲ್ಲಿ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸರಿಯಲ್ಲ. **ದಿಃ 05-12-2016 ರಂದು ಬರೆದಿರುವ ದಾಖಲೆಯ ಝೇರಾಕ್ಸ ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ತಾನೇ ಬರೆದಿರುವುದಾಗಿ ಒಪ್ಪಿಕೊಂಡಿರುವ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.** ಕೆಎ-29 ಟಿಎ 9269 ಟ್ರಾಕ್ಟರ ಮತ್ತು ಟ್ರೇಲರ ನಂ.ಕೆಎ 29 ಟಿಎ-9270 ಗಳು ಪ್ರತಿವಾದಿರವರ ಗಂಡನ ಹೆಸರಿನಲ್ಲಿ ಇದ್ದು ಅದನ್ನು ವಾದಿಗೆ ಮಾರಾಟ ಮಾಡಿದ ಬಗ್ಗೆ ನಿಡಿ-1 ಬರೆದಿರುತ್ತೇನೆ. ಸದರಿ ಮಾರಾಟ ವ್ಯವಹಾರ 2 ಲಕ್ಷ ರೂಪಾಯಿಗೆ ಆಗಿದ್ದು ಸದರಿ ಹಣವನ್ನು ನನ್ನ ಕಚೇರಿಯಲ್ಲಿ ಕೊಟ್ಟರು. ನಿಡಿ-2 ರ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಯಾವದೇ ಟ್ರಾಕ್ಟರ ಹೊಂದಿರಲಿಲ್ಲ ಆದರೂ ಆತನ ಮನೆಯಲ್ಲಿ ಇರುವ ಕಬ್ಬಿನ ಗ್ಯಾಂಗ ಮಾಡಲು ಇಟ್ಟಿದ್ದ ಖಾಲಿ ಬಾಂಡನ್ನು ವಾದಿ ಪಡೆದು ದಶರಥರವರ ಮರಣಾನಂತರ ಸುಳ್ಳು ನಿಡಿ-1 ನ್ನು ಸೃಷ್ಟಿಸಿದರು ಎಂದರೆ ಸರಿಯಲ್ಲ.

4. ವಾದಿ ನನ್ನ ಕಚೇರಿಗೆ ಬಹಳ ವರ್ಷಗಳಿಂದ ಬರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ತಮ್ಮ ಜಮೀನು ಮಾರಾಟ ವಾದಿಗೆ ಮಾಡಲಿಲ್ಲ ಎನ್ನುವ ಕಾರಣ ಸುಳ್ಳು ಪ್ರಾಮಿಸರಿ ನೋಟಗಳನ್ನು ವಾದಿ ನನ್ನ ಜೊತೆ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಗೆ ಸಂಬಂಧ ಪಟ್ಟಂತೆ ಸಿವಿಲ ನ್ಯಾಯಾಲಯ ಕೀ.ಶ್ರೇಣಿಯಲ್ಲಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ